ನ್ಯಾಯ ಕೇಳೋದಕ್ಕ ಎಲ್ಲ ಕೋತಿಗಳೆ
ಹೊರನಡೆಯುವುದೊಂದೇ ಬಾಕಿ ಹೆಂಗಾರ

ಮಾತು ಮರೆತೋಯ್ತು ಒಳಗ ಹೊಸ ಭಾಷೆ ಹುಟ್ಟಿತ್ತು
ಒಡಲ ಬಗಿದು ಅದು ಹೊರಬಂತು
ಉರಿವ ಕೊಳ್ಳಿಗೆ ಬೇಲಿ ಹಾಕುವ ತಾಕತ್ತು ಯಾರಿಗಿತ್ತು
ನಡೆದ ಹಾದಿಗೆ ಬೆಳಕು
ಹರಡಿತ್ತು ಹೊರಟಾಗ ಸರಿದಿತ್ತು ಜನಸಾಗರ ದೂರ ದೂರ

ಹೀಗೂ ನಡೆಯುವ ಬೇಗೆ
ನಿನಗ್ಯಾಕೆ ನನತಾಯಿ ಬಿಟ್ಟು ಬಿಡಬಾರದೆ
ನಡೆದ ಹಾದಿಯ
ಬದಲು ಮಾಡುವ ನಿನ್ನ ಹೊಗಳೋದು ಹ್ಯಾಂಗೇಳು
ದೂಡಿದಾಂಗ ನಾವು ಸುಡುವ ಉರಿಯೊಳಗ

ಬಿದ್ದು ಮೇಲೆದ್ದೇನು
ಬೆಂಕಿಯ ಹೂವಾಗಿ ಮುಟ್ಟಾಕ ಬರಲೇಳು ಹುಟ್ಟಾ ಮದನರು
ಹೀಂಗ ಕೇಳಿದರ
ಏನು ಹೇಳ್ಯಾರು ಬುದ್ಧಿ ಹೇಳೋರು

ಬೆಟ್ಟಾ ಹತ್ತಬೇಕು ನನಗೇನೊ ಸಿಗಬೇಕು ಅದನೆಲ್ಲ ನಿಮಗ ಹೇಳಬೇಕು
ಉದರುವ ಕಣ್ಣೀರ ಬಾಡುವ ಹೂಗಳ ಗಂಟಲಿಗೆ ಗುಟುಕಿಸಿ
ನಾ ಬರತೇನಿನ್ನು ಏನೋ ಕರೆದೈತಿ
ಕಟುಸತ್ಯವದು ಹೇಳುವಂತಿಲ್ಲ ಏನು
ಹಾಗೆ ಹೋದದ್ದೆ ಬಂತು
ಆಡಿದ್ದೆಲ್ಲ ಜಗಮಾತು ಕಲಿತು ಬಿಟ್ಟಿತು ಹೇಗೋ
ಕಲಿಸಿದುಕೆ ಅದು ಗೊತ್ತೇ ಇರಲಿಲ್ಲ
ಕಲಿಸುವುದೂ ಅದಕೆ ಬೇಕಿರಲಿಲ್ಲ

ಇಲ್ಲವೆಂಬುದು ಸತ್ಯ ಸಿಕ್ಕಿದ್ದು ಬಲು ಸತ್ಯ ನಂಬಬೇಕು
ಎಂದು ಹಲುಬಲಿಲ್ಲ
ಇದ್ದದ್ದು ಇಲ್ಲವಾಗಿ ಇಲ್ಲದ್ದು ಸಿಕ್ಕಾಗಿ ಕಂಡವರು ಯಾರು ಹೇಳಿರಯ್ಯಾ
ಹೇಳಿ ಹೋಯಿತು ಜೀವ ಏನೋ ಪಡೆದುಕೊಂಡು
ಬೇಡವಾಗಲಿಲ್ಲ ಕಡೆತನಕ ಯಾರಿಗೂ

ಈ ನೆಲದ ಪ್ರತಿಕಣದ ಕಣ್ಣು
ಉಳಿವನಕ ಉಳಿದಾವ್ರೋ ಅವಳಿಗೊಲಿದ ಪದಗಳು
ಉರಿಗೊಳ್ಳಿಯ ಬಳ್ಳಿ ಹಬ್ಬಿದ ಪರಿಯನ್ನು
ಸಿಕ್ಕವರು ಸಿಕ್ಕಾಂಗ
ಹೇಳಿದರೂ ತಪ್ಪಿಲ್ಲ ಹೇಳಬೇಕು ನಾನು ನೀವು ತಪ್ಪಾದರೂ